OS No. 79/2018

DW-2

**(ಇಂದು ದಿಃ 17-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

**ಪಾಟೀ ಸವಾಲುಃ- ವಾದಿಯರ ಪರ ಶ್ರೀ.NR ವಕೀಲರಿಂದಃ-**

ನಾನು Msc BED ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ಮೊದಲು MSC ಓದಿ ನಂತರ BED ಮಾಡಿದ್ದೇನೆ. MSC 2016 ರಲ್ಲಿ ಪೂರ್ಣ ಗೊಳಿಸಿದ್ದೇನೆ. BED 2017 -18 ರಲ್ಲಿ ಪೂರ್ಣಗೊಳಿಸಿದ್ದೇನೆ. ನಾನು ರೇಗುಲರ್ ಕಾಲೇಜಿನಲ್ಲಿ ದಿನ ಕಾಲೇಜಿಗೆ ಹೋಗಿ ಮೇಲಿನ ಶಿಕ್ಷಣ ಪಡೆದುಕೊಡಿದ್ದೇನೆ. ನಾನು Msc and BED ಕಲಬುರಗಿಯಲ್ಲಿ ಓದಿದ್ದೇನೆ. ನನ್ನ ತಾತ ಚಂದ್ರಪ್ಪ 23.04.2018 ರಂದು ತೀರಿ ಹೋಗಿದ್ದಾರೆ. ಚಂದ್ರಪ್ಪ ತೆರಿ ಹೊಗುವ 06 ತಿಂಗಳ ಮುಂಚಿನಿಂದ ಹಾಸಿಗೆ ಹಿಡಿದಿದ್ದರು ಎಂದರೆ ಸರಿ . ಅವರ ಕಾಲು ಮೂಳೆ ಮುರಿತಾ ಆಗಿತ್ತು ಅವರಿಗೆ ನಡೆಯಲು ಆಗುತ್ತಿರಲಿಲ್ಲ ಎಂದರೆ ಸರಿ. ಆ ಸಮಯದಲ್ಲಿ ನನ್ನ ತಾತನ ಬಳಿ ನನ್ನ ಅಜ್ಜಿ ಮತ್ತು ಅತ್ತೆ 1ನೇ ವಾದಿ ಇದ್ದರು ಎಂದರೆ ಸರಿ ಯಲ್ಲ, ಸಾಕ್ಷಿ ಮುಂದುವರೆದು ನನ್ನ ತಾತನ ಬಳಿ ನನ್ನ ಅಜ್ಜಿ ಮತ್ತು ನಾನು ಇದ್ದೇವು, 1ನೇ ವಾದಿ ಇರಲಿಲ್ಲ ಎಂದು ಹೇಳುತ್ತಾರೆ . ನಾನು ಕಾಲೇಜಿಗೆ ಹೋಗುತ್ತಿದ್ದರಿಂದ ನನ್ನ ತಾತನ ಯೋಗಕ್ಷೇಮ ನೋಡಲು ನನ್ನ ಬಳಿ ಸಮಯ ಇರಲಿಲ್ಲ ಎಂದರೆ ಸರಿಯಲ್ಲ,

ನನ್ನ ತಾತ ವಿಲ್ ಪತ್ರ ಬರೆದುಕೊಟ್ಟಿದ್ದಾರೆ ಮತ್ತು ಅದನ್ನು ಒಬ್ಬ ಚಂದ್ರಶೇಖರ ಬರವಣಿಗೆ ಮಾಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ಸದರಿ ವಿಲ್ ಪತ್ರಕ್ಕೆ ಭೀಮರಡ್ಡಿ ಮತ್ತು ಬಸಪ್ಪ ಸಾಕ್ಷಿ ದಾರರಾಗಿ ಸಹಿ ಮಾಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ವಿಲ್ ಬರೆದಾಗ ಯಾರು ಯಾರು ಇದ್ದರು ನನಗೆ ಗೊತ್ತಿಲ್ಲ, ವಾದಿಯರಿಗೆ ಭಾಗ ಕೋಡಬಾರದು ಎಂದು ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ,

**ಮರು ವಿಚಾರಣೆ ಇಲ್ಲ,**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**

**ಸೇಡಂ.**